ಬಿದ್ದಿರೋದು ಕೂನಿಕೆರೆ ಹನುಮಂತರಾಯನಾಣೆಗೂ ನಂಗೊತ್ತಿಲ್ಲ... ಪಿಡಿಒಗೂ ಗೊತ್ತಿಲ್ಲ. ಗೊತ್ತಿದ್ರೆ ನಂಗೆ ಹೇಳ್ತಿದ್ದ' ಅಂತ ಕೆರೆಯಲ್ಲಿ ಹೆಣ ಬಿದ್ದಿರೊ ಸುದ್ದಿ ಹೇಳಲು ಬಂದವರ ಎದುರು ಚೇರ್ಮನ್ನರು ಅಮಾಯಕತೆಯನ್ನು ನಟಿಸುತ್ತ ಹೇಳಿದರು.

'ನೀವು ಬರೋಕೆ ಸ್ವಲ್ಪ ಹೊತ್ತಿನ ಮೊದಲು ನಮ್ಮ ತಿಮ್ಮರಾಯಿ ನಂಗೆ ಈ ವಿಷ್ಯ ಹೇಳ್ದ. ಪಿಡಿಒ ಮೆಕ್ಯಾನಿಕ್ ಕರಕಂಡು ಬೆಳಿಗ್ಗೆ ಬರಬೌದು. ಈಗ ಐದು ನಿಮಿಷ ಮೊದಲು ಪಿಡಿಒಗೆ ಫೋನ್ ಮಾಡಿ, ಮೊದಲು ಪೊಲೀಸರಿಗೆ ಕಂಪ್ಲೇಂಟ್ ಕೊಡು ಅಮ್ತ ಹೇಳಿದೀನಿ. ಪೊಲೀಸರು ಬರೋದು ನಾಳೆ ಬೆಳಿಗ್ಗೆನೇ. ಅವರೇ ಬಂದು ಹೆಣ ಎತ್ತಲಿ... ಕೆರೆಗೆ ಬಿದ್ದಿರೋ ಹೆಂಗಸು ಯಾರಂತೆ? ನಮ್ಮೂರವರೊ ಅಥವಾ ಅಕ್ಕ ಪಕ್ಕದ ಊರವರೊ...' ಅಂತ ಪ್ರಶ್ನಿಸಿ ಅವರನ್ನು ತಬ್ಬಿಬ್ಬಾಗುವಂತೆ ಮಾಡಿದರು.

ಊರವರಿಗೆ ಗೊತ್ತಾಗದಂತೆ ಹೆಣಗಳನ್ನು ಕೆರೆಯಿಂದ ಎತ್ತಿ ಹೊರಕ್ಕೆ ಹಾಕದು ಸಾಧ್ಯವಿಲ್ಲ ಅನ್ನೋದು ಚೇರ್ಮನ್ನರಿಗೆ ಮನದಟ್ಟಾಯಿತು. ಅಷ್ಟರಲ್ಲಿ ಪಿಡಿಒ ಫೋನ್ ಬಂತು. 'ಕಬ್ಬನಳ್ಳಿ ಪೊಲೀಸ್ ಸ್ಟೇಷನ್ ಸೀಲ್‌ಡೌನ್ ಆಗಿದೆ. ಸ್ಟೇಷನ್ನಿನ ಒಬ್ಬ ಪೀಸಿಗೆ ಕೊರೊನಾ ಪಾಸಿಟಿವ್ ಅಂತ ನಿನ್ನೆ ಗೊತ್ತಾಯ್ತಂತೆ. ಈಗ ಇಬ್ಬರು ಪಿಸಿಗಳು ರಂಗಪ್ಪನ ಗುಡಿ ಹಿಂದೆ ಬಯಲಲ್ಲಿ ಮರದ ಕೆಳಗೆ ಟೇಬಲ್ಲು, ಚೇರು ಹಾಕಿಕೊಂಡು ಕುಂತವರೆ. ಇನ್ನೂ ಏಳು ದಿನ ಅಲ್ಲಿಂದಲೇ ಸ್ಟೇಷನ್ನು ಕೆಲಸ ಮಾಡುತ್ತಂತೆ. ಉಳಿದೋರು ಕೊರೊನಾ ಡ್ಯೂಟಿ ಮೇಲೆ ಹೋಗಿದ್ದಾರಂತೆ. ಸಿಐ ಸಾಹೇಬರು ದುರ್ಗಕ್ಕೆ ಹೋಗಿದ್ದರು. ಅವರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದೀನಿ. ನಾಳೆ ಬೆಳಿಗ್ಗೆ ಪೊಲೀಸರನ್ನು ಕಳಿಸ್ತಾರಂತೆ. ಮಧ್ಯಾಹ್ನದ ಹೊತ್ತಿಗೆ ಅವರೇ ಬರ್ತಾರಂತೆ. ಹೆಣಗಳನ್ನು ಎತ್ತೋಕೆ, ಮಹಜರು ಮಾಡೊಕೆ ಊರ ಜನ ಸಹಕಾರ ಕೊಡಬೇಕು' ಅಂತ ಹೇಳಿದರು...

'ಕೆರೆ ಹತ್ರಕ್ಕೆ ಹೋಗಿ ಬಂದ ಮೇಲೆ ನಂಗೆ ಮೈ ಬಿಸಿಯಾಗಿದೆ. ಜ್ವರ ಬರಬೌದು ಅನ್ನಂಗಿದೆ. ನೆಗಡೀನೂ ಶುರುವಾಗಿದೆ. ಕೊರೊನಾ ಬಂದಿರಬಹುದು ಅಂತ ನಂಗೆ ಭಯವಾಗ್ತಿದೆ... ಈಗ ದುರ್ಗದಲ್ಲಿ ಇದೀನಿ. ಇವತ್ತು ಇಲ್ಲೇ ಇದ್ದು, ಬೆಳಿಗ್ಗೆ ಡಾಕ್ಟರಿಗೆ ತೋರಿಸಿಕೊಂಡು ಮಧ್ಯಾಹ್ನದ ಹೊತ್ತಿಗೆ ಊರಿಗೆ ಬರ್ತೀನಿ... ಅಲ್ಲೀತಂಕ ನೀವೇ ಎಲ್ಲವನ್ನೂ ಮ್ಯಾನೇಜು ಮಾಡಬೇಕು...' ಅಂತ ಅತ್ಯಂತ ವಿನಯವಾಗಿ ಹೇಳಿ ಉತ್ತರಕ್ಕೆ ಕಾಯದೆ ಫೋನ್ ಡಿಸ್‌ಕನೆಕ್ಟ್ ಮಾಡಿದ.

ಅಮರನಾರಾಯಣ ಕೈಕೊಟ್ಟ ಅಂತ ಚೇರ್ಮನ್ನರಿಗೆ ಅರ್ಥವಾಯಿತು. ಹತ್ತು ನಿಮಿಷ ಬಿಟ್ಟು ಅವನಿಗೆ ಫೋನ್ ಮಾಡಿದರು. ಅವನು ಫೋನ್ ಆಫ್ ಮಾಡಿಕೊಂಡಿದ್ದ. ಸರ್ಕಾರಿ ನೌಕರರಿಗೆ ಚಳಿ, ಜ್ವರ, ನೆಗಡಿ ಇತ್ಯಾದಿ ಜಡ್ಡುಗಳು ಅವರಿಗೆ ಬೇಕಾದಾಗ ಬರುತ್ತವೆ ಅನ್ನೋದು ಚೇರ್ಮನ್ನರಿಗೆ ಚೆನ್ನಾಗಿ ಗೊತ್ತು. ಕೆರೆಯಿಂದ ಹೆಣಗಳನ್ನು ಎತ್ತಿ ಹೊರಹಾಕೊವರೆಗೂ ಅಮರನಾರಾಯಣ ಊರಿಗೆ ಬರಲ್ಲ ಅಂತ ಅವರಿಗೆ ಅನ್ನಿಸಿಬಿಟ್ಟಿತು. ಬೇಕಾದ್ದು ಬರಲಿ, ಅದೇನಾಗುತ್ತೋ ಆಗಲಿ... ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟ ಮೇಲೆ ಗ್ರಾಮ ಪಂಚಾಯ್ತಿಯವರ ಜವಾಬ್ದಾರಿ ಮುಗೀತು... ಮುಂದೇನಾಗುತ್ತೋ ನೋಡೇ ಬಿಡೋಣ ಎನ್ನುವ ನಿರ್ಧಾರಕ್ಕೆ ಬಂದರು.

ರಾತ್ರಿ ಹತ್ತರ ಹೊತ್ತಿಗೆ ಹನುಮಂತರಾಯ ಚೇರ್ಮನ್ನರ ಮನೆಗೆ ಬಂದ. 'ಕೆರೆಗೆ ಹೆಣಗಳು ಬಿದ್ದಿರೊ ವಿಷಯಾನ ಪಂಚಾಯ್ತಿ ಚೇರ್ಮನ್ನರಾಗಿ ನೀವು ಮತ್ತು ಪಿಡಿಒ ಊರ ಜನರಿಂದ ಮುಚ್ಚಿಟ್ಟು ದೊಡ್ಡ ತಪ್ಪು ಮಾಡಿದ್ದೀರ ಅಂತ ಊರ ಜನ ತಿಳಕೊಂಡಿದ್ದಾರೆ. ನಾಳೆ ಬೆಳಿಗ್ಗೆ ಊರಮುಂದಿನ ಗುಡಿ ಕಟ್ಟೆ ಮೇಲೆ ದಾಸಣ್ಣ ಮಾಮ ಪಂಚಾಯ್ತಿ ಕರೆದಿದ್ದಾರೆ. ನೀವು ಮತ್ತು ಪಿಡಿಒ ಅಲ್ಲಿಗೆ ಬಂದು ಊರ ದೈವಸ್ಥರು ಕೇಳೊ ಪ್ರಶ್ನೆಗಳಿಗೆ ವಿವರಣೆ ಕೊಡಬೇಕಂತೆ. ಇದನ್ನು ನಿಮಗೆ ಹೇಳಿ ಬಾ ಅಂತ ಮಾಮಾರು ನನ್ನ ಕಳಿಸಿದರು' ಅಂತ ಅತ್ಯಂತ ವಿನಯವಾಗಿ ಹೇಳಿ ಅವರ ಮುಖ ನೋಡಿದ...

ಅವನ ಮಾತು ಕೇಳಿ ಚೇರ್ಮನ್ನರಿಗೆ ರೇಗಿ ಹೋಯಿತು. 'ಬಪ್ಪರೆ ಮಗನೆ... ನೀನು ಅಳಿಯತನಕ್ಕೆ